ನನಗೂ ಆ ರೀತಿ ಇಷ್ಟ. ಒಂದು ಮಹಿಳೆಯ ದೃಷ್ಟಿಕೋನದಲ್ಲಿ ಮಹಿಳೆಯ ಕಥೆ ಹೇಳಿದರೆ ಅದು ಯಾವ ರೀತಿ ಇರುತ್ತದೆ ಎಂಬುದನ್ನು ಪ್ರಭಾವಕಾರಿಯಾಗಿ ತೋರುವ ಆಸೆ.

ಬಹುಪಾಲು ಕಮರ್ಷಿಯಲ್ ಸಿನಿಮಾಗಳಲ್ಲಿ ಹೆಣ್ಣನ್ನು ಬಿಂಬಿಸುವ ರೀತಿಗೆ ಚೌಕಟ್ಟಿರುತ್ತದೆ. ಆದರೆ ಕಮರ್ಷಿಯಲ್ ಆಗಿಯೂ ಹೆಣ್ಣಿನ ಪಾತ್ರಕ್ಕೆ ಒಂದು ಆಳ, ಆಯಾಮ, ಪದರ ಸೇರಿದಾಗ ಎಷ್ಟು ಸುಂದರವಾಗಬಹುದು ಎಂಬುದನ್ನು ಎಕ್ಸ್‌ಪ್ಲೋರ್ ಮಾಡುವಾಸೆ.

◆ **ನಿರ್ದೇಶನದಲ್ಲಿರುವ ಸವಾಲು ಏನೆನಿಸುತ್ತಿದೆ?**

ಸಿನಿಮಾವನ್ನು ಹೇಗೆ ನಿಭಾಯಿಸುತ್ತೇವೆ ಎಂಬುದು ಯಾವುದೇ ನಿರ್ದೇಶಕರಿಗೂ ಸವಾಲು. ಆದರೆ ಅದನ್ನು ಸವಾಲಾಗಲ್ಲದೆ ಒಂದು ಉತ್ತಮ ಅವಕಾಶವೆಂದು ಪಾಸಿಟಿವ್ ಆಗಿ ತೆಗೆದುಕೊಂಡರೆ ಸುಂದರ ಅನುಭವ ನಮ್ಮದಾಗುತ್ತದೆ. ಈಗ ಸಿನಿಮಾ ಮಾಡುವುದಷ್ಟೇ ಅಲ್ಲದೆ ಅದನ್ನು ಸಹೃದಯ ಪ್ರೇಕ್ಷಕರಿಗೆ ತಲುಪಿಸುವುದೂ ಸವಾಲು. ಈಗ ಎಲ್ಲ ಕಡೆ ಕಂಟೆಂಟ್ ಸಿಗುತ್ತಿದೆ. ಪ್ರೇಕ್ಷಕರಿಗೂ ಎಕ್ಸ್‌ಪೋಷರ್ ಇದೆ. ಅವರೂ ತುಂಬಾ ಯೋಚನೆ ಮಾಡಿ ಯಾವುದನ್ನು ತೆಗೆದುಕೊಳ್ಳಬೇಕು ಎಂದು ನಿರ್ಧರಿಸುತ್ತಾರೆ. ಹೀಗಾಗಿ ನಿರ್ದೇಶಕರ ಜವಾಬ್ದಾರಿ ಹಿಂದೆಂದಿಗಿಂತ ಹೆಚ್ಚಿದೆ.

◆ **ನಿರ್ದೇಶನಕ್ಕೆ ತಯಾರಿ ಹೇಗಿದೆ?**

ಇದೇ ಕ್ಷೇತ್ರದಲ್ಲಿರುವುದರಿಂದ ಸಿನಿಮಾದ ಮೂಲ ವಿಷಯಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ಇದಕ್ಕೆ ತಯಾರಿಗಿಂತ ಹೆಚ್ಚಾಗಿ ಬೆಂಬಲ ಬೇಕಾಗುತ್ತದೆ. ಅದು ನನಗೆ ಸಿಕ್ಕಿದೆ. ನಟಿಯಾಗಿ ನನ್ನನ್ನು ನೋಡಿರುವ ಜನ, ನಿರ್ದೇಶಕಿಯಾಗಿ ಹೇಗೆ ಸ್ವೀಕರಿಸುತ್ತಾರೆ ಎಂಬ ಕುತೂಹಲವೂ ಇದೆ. ಫಲಿತಾಂಶಕ್ಕಿಂತ ಪ್ರಯತ್ನ ಮುಖ್ಯ ಎನ್ನುವುದು ನನ್ನ ಅನಿಸಿಕೆ.

◆ **ಯಾವ ರೀತಿಯ ಕಂಟೆಂಟ್ ಅನ್ನು ಜನ ಇಷ್ಟಪಡುತ್ತಿದ್ದಾರೆ ಎಂದು ನಿಮಗನಿಸುತ್ತದೆ?**

ಮುಂಚೆ ಟಿಪಿಕಲ್ ಕಮರ್ಷಿಯಲ್ ಸಿನಿಮಾಗಳನ್ನು ಮಾತ್ರ ಇಷ್ಟಪಡುವವರು ಹೆಚ್ಚಿದ್ದರು. ಈಗ ಎಲ್ಲ ರೀತಿಯ ಕಂಟೆಂಟ್‌ಗಳಿಗೂ ಪ್ರೇಕ್ಷಕರಿದ್ದಾರೆ. ಆದರೆ ಸಿನಿಮಾ ಎನ್ನುವುದೇ ಒಂದು ಮ್ಯಾಜಿಕ್. ಯಾವಾಗ ಯಾವ ರೀತಿಯ ಸಿನಿಮಾ ವರ್ಕ್ ಆಗುತ್ತೆ ಎಂದು ಅಂದಾಜಿಸುವುದು ಕಷ್ಟ.

◆ **ನಿಮ್ಮ ಮುಂದಿನ ಯೋಜನೆಗಳು?**

ಸದ್ಯಕ್ಕೆ ನಿರ್ದೇಶನದಲ್ಲಿ ನನ್ನನ್ನು ನಾನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದೇನೆ. ಈ ಫೀಚರ್ ಸಿನಿಮಾ ನಂತರವೇ ಮುಂದಿನ ಯೋಚನೆ ಮಾಡುವುದು. ■

# ನಮ್ಮಲ್ಲಿ ಪ್ರತಿಭೆಗಳಿಗೇನೂ ಕೊರತೆಯಿಲ್ಲ



'ಪ್ರತಿ ಕ್ಷೇತ್ರದಲ್ಲೂ ಸವಾಲಿದೆ. ಅದಕ್ಕೆ ಸಿನಿಮಾರಂಗವೂ ಹೊರತಲ್ಲ. ಗುಣಮಟ್ಟದ ಕಂಟೆಂಟ್ ಇದ್ದರೆ ಮಾತ್ರ ಸಿನಿಮಾ ಬದುಕಬಲ್ಲದು. ಹಿಟ್ ಸಿನಿಮಾಗಳನ್ನು ನೀಡಿದ ಹೊರತಾಗಿಯೂ ತನ್ನದೇ ಒಂದು ಸ್ಥಿರವಾದ ಪ್ರೇಕ್ಷಕರನ್ನು ಕಟ್ಟಿಕೊಳ್ಳುವಲ್ಲಿ ಕನ್ನಡ ಸಿನಿಮಾರಂಗ ಸಾಕಷ್ಟು ಹೋರಾಟ ಮಾಡಿದೆ. ಈ ಒಂದು ಅಡೆತಡೆಯಿಂದ ಹೊರಬರಲು ಸಿನಿಮಾ ಮಾರುಕಟ್ಟೆ ಬದಲಾವಣೆಗಳನ್ನು ಅರ್ಥ ಮಾಡಿಕೊಳ್ಳುವುದು ಕೂಡ ತುಂಬಾ ಮುಖ್ಯ' ಎಂದು ವಿಶ್ಲೇಷಿಸಿದ್ದಾರೆ ನಟ ಕಿಶೋರ್.

ಕನ್ನಡ ಸಿನಿಮಾರಂಗದಲ್ಲಿ ನಿರ್ದೇಶಕರ ಹೊಸ ಅಲೆಯ ಕುರಿತು ಮಾತು ಹಂಚಿಕೊಂಡಿರುವ ಅವರು, 'ನಮ್ಮ ಸಿನಿಮಾರಂಗದಲ್ಲಿ ಪ್ರತಿಭೆಗಳಿಗೆ ಕೊರತೆಯಿಲ್ಲ. ಹೊಸ ಹೊಸ ಆಲೋಚನೆಗಳನ್ನೊಳಗೊಂಡ ಸಿನಿಮಾಗಳು ಬರುತ್ತಲೇ ಇವೆ. ದುರದೃಷ್ಟವೆಂದರೆ, ದೊಡ್ಡ ಮಟ್ಟದಲ್ಲಿ ಪ್ರೇಕ್ಷಕರನ್ನು ತಲುಪಲು ಎಷ್ಟೋ ಸಿನಿಮಾಗಳಿಗೆ ಸಾಧ್ಯವಾಗುತ್ತಿಲ್ಲ. ಇದು ಬರೀ ನಿರ್ದೇಶಕರ ಜವಾಬ್ದಾರಿಯಲ್ಲ. ಯಾವುದೇ ಸಿನಿಮಾ ಯಶಸ್ಸಿಗೆ ಪರಿಣಾಮಕಾರಿ ಮಾರ್ಕೆಟಿಂಗ್ ತುಂಬಾ ನಿರ್ಣಾಯಕವಾಗಿರುತ್ತದೆ' ಎಂದಿದ್ದಾರೆ.

ಕಿಶೋರ್ ನಟನೆಯ, ರೈತರ ಕಥೆಯನ್ನೊಳಗೊಂಡ 'ಕಬಂಧ' ಸಿನಿಮಾ ಈಚೆಗೆ ಬಿಡುಗಡೆಯಾಗಿದೆ. 'ಆಪರೇಷನ್ ಕೊಂಬುಡಿಕ್ಕಿ' ಎಂಬ ಸಿನಿಮಾದಲ್ಲಿಯೂ ನಾಯಕನಾಗಿ ಕಾಣಿಸಿಕೊಳ್ಳಲಿದ್ದಾರೆ. ■

# ಮೇಘಾ ಸಿನಿಮಾ ಮಾಲೆ



'ಜೊತೆ ಜೊತೆಯಲಿ' ಧಾರಾವಾಹಿ ಮೂಲಕ ಕಿರುತೆರೆಯಲ್ಲಿ ಮನೆಮಾತಾಗಿ ಬೆಳ್ಳಿತೆರೆಗೆ ಹೆಜ್ಜೆ ಇಟ್ಟಿದ್ದ ನಟಿ ಮೇಘಾ ಶೆಟ್ಟಿ ಅಭಿನಯದ ಮತ್ತೊಂದು ಸಿನಿಮಾ ತೆರೆಗೆ ಬರಲು ಸಜ್ಜಾಗಿದೆ. 'ತ್ರಿಬಲ್ ರೈಡಿಂಗ್', 'ದಿಲ್‌ಪಸಂದ್', 'ಕೈವ' ಸಿನಿಮಾಗಳ ಮೂಲಕ ಚಂದನವನದಲ್ಲಿ ಮುನ್ನುಡಿ ಬರೆದಿರುವ ಮೇಘಾ ಶೆಟ್ಟಿ, ಈ ಸಿನಿಮಾದಲ್ಲಿ ಹಳ್ಳಿ ಹುಡುಗಿಯಾಗಿ ಮಿಂಚಲಿದ್ದಾರೆ. ಸಡಗರ ರಾಘವೇಂದ್ರ ನಿರ್ದೇಶನದ 'After ಆಪರೇಷನ್ ಲಂಡನ್ CAFE' ಸಿನಿಮಾದಲ್ಲಿ ಅವರು ನಟಿಸುತ್ತಿದ್ದಾರೆ.

ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು, ಕವೀಶ್ ಶೆಟ್ಟಿ ಮತ್ತು ಮೇಘಾ ಶೆಟ್ಟಿ ಕಾಂಬಿನೇಷನ್‌ನ ಈ ಚಿತ್ರ ಕನ್ನಡ, ಮರಾಠಿ ಮತ್ತು ಇತರ ಭಾಷೆಗಳಲ್ಲಿ ಬಿಡುಗಡೆಗೊಳ್ಳಲಿರುವುದಾಗಿ ಚಿತ್ರತಂಡ ಮಾಹಿತಿ ನೀಡಿದೆ.

'After ಆಪರೇಷನ್ ಲಂಡನ್ CAFE'ದೊಂದಿಗೆ 'ಗ್ರಾಮಾಯಣ' ಹಾಗೂ 'ಚೇತಾ' ಸಿನಿಮಾಗಳೂ ಸರದಿಯಲ್ಲಿವೆ. ■